ಉದ್ದೇಶವಿರುತ್ತದೆ. ಉಪವಾಸ ಮಾಡುವವರ ಕುರಿತು ಯಾವತ್ತೂ ಅನುಕಂಪ ಸೂಚಿಸುವ ಸಮಾಜವು, ಆ ವ್ಯಕ್ತಿ ಯಾವುದೇ ಕಾರಣಕ್ಕೆ ಅಸು ನೀಗಿದರೂ ಅದನ್ನು ಉಗ್ರವಾಗಿ ಪ್ರತಿಭಟಿಸುತ್ತದೆ ಮತ್ತು ಶೋಷಕನನ್ನು ಅಪರಾಧಿಯಾಗಿ ಕಾಣುತ್ತದೆ. ಅಂತಹ ಸಂದರ್ಭವನ್ನು ಎದುರಿಸುವುದಕ್ಕೆ ಆತಂಕಗೊಳ್ಳುವ ಶೋಷಕ ಸಮುದಾಯವು ಸತ್ಯಾಗ್ರಹಿಗಳ ಕೋರಿಕೆಗಳನ್ನು ಮನ್ನಣೆ ಮಾಡುವ ಸಾಧ್ಯತೆಗಳಿವೆ. ಆದರೆ ಈ ಕ್ರಮವನ್ನು ಡಾ. ಅಂಬೇಡ್ಕರ್ ಅವರು ಸಂವಿಧಾನ ವಿರೋಧವೆಂದು ಅಭಿಪ್ರಾಯ ಪಡುತ್ತಾರೆ. ಸಂವಿಧಾನದಿಂದ ನ್ಯಾಯ ಪಡೆಯುವ ಎಲ್ಲಾ ಕ್ರಮಗಳು ಸೋತಾಗ ಮಾತ್ರ ಉಪವಾಸ ಸತ್ಯಾಗ್ರಹ ಎಂಬ ಅಂತಿಮ ಅಸ್ತ್ರ ಪ್ರಯೋಗಿಸಬೇಕು ಎಂದು ಹೇಳುತ್ತಾರೆ. ಒಂದು ರೀತಿಯಲ್ಲಿ ದೇಹ ದಂಡಿಸಿ ನ್ಯಾಯ ಪಡೆಯುವ ಕ್ರಮವನ್ನು ಅಂಬೇಡ್ಕರ್ ಒಪ್ಪಿರಲಿಲ್ಲ ಎಂದೇ ಹೇಳಬಹುದಾಗಿದೆ.

ಇತ್ತೀಚೆಗೆ ನಾನು ಮಿನ್ನುಲಿಯೊಂದನ್ನು(podcast) ಕೇಳಿದೆ. ಸಂದರ್ಶಕರು ಒಬ್ಬ ದಲಿತ ವಿದ್ವಾಂಸರನ್ನು ಮಾತನಾಡಿಸಿದರು. ಈ ದಲಿತ ವಿದ್ವಾಂಸರು ಬಾಲ್ಯದಲ್ಲಿ ತಾವು ಮತ್ತು ತಮ್ಮ ಹಟ್ಟಿಯವರು ಎದುರಿಸಿದ ಎಲ್ಲ ಸಂಕಷ್ಟಗಳನ್ನೂ ವಿವರಿಸಿದರು. ಯಾವ ಯಾವ ಹೀನ ಕ್ರಮಗಳಲ್ಲಿ ಮೇಲ್ಜಾತಿಯವರು ತಮ್ಮನ್ನು ಶೋಷಿಸಿದರು ಎಂದು ಅವರು ವಿವರಿಸುವಾಗ ದುಃಖವಾಗುತ್ತಿತ್ತು. ಆದರೆ ಕೊನೆಯಲ್ಲಿ ಸಂದರ್ಶಕ ಒಂದು ವಿಶೇಷ ಪ್ರಶ್ನೆ ಕೇಳಿದ 'ಈ ದಿನಗಳಲ್ಲಿ ಹಲವಾರು ದಲಿತರ ಬದುಕು ಹಸನುಗೊಂಡಿದೆಯಲ್ಲವೆ? ಅಂತಹವುದರಲ್ಲಿ ಯಾವ ಬದಲಾವಣೆ ನಿಮಗೆ ಸಂತಸ ನೀಡುತ್ತದೆ?' –ಆ ದಲಿತ ವಿದ್ವಾಂಸರು ಹೆಚ್ಚು ಗೊಂದಲಕ್ಕೆ ಒಳಗಾಗದೆ ತಕ್ಷಣ ಉತ್ತರಿಸಿದರು. 'ನಮ್ಮ ಹುಡುಗರು ಮೇಲ್ಜಾತಿಯ ಹುಡುಗರ ಮುಂದೆ ತಲೆ ಎತ್ತಿ ನಿಂತು ಸಿಗರೇಟು ಸೇದಿ, ಆಕಾಶಕ್ಕೆ ಹೊಗೆ ಬಿಡ್ತಾರೆ ಸಾರ್. ಅದು ನನಗೆ ಸಂತೋಷ ತರುತ್ತದೆ. ಚಿಕ್ಕಂದಿನಲ್ಲಿ ನಾವು ಎಲ್ಲೋ ಸಿಕ್ಕ ಮೋಟು ಬೀಡಿಯನ್ನು ಕದ್ದು ಸೇದುವಾಗಲೂ ಅವರ ಕಣ್ಣಿಗೆ ಬಿದ್ದು ದೊಡ್ಡ ಶಿಕ್ಷೆಗೆ ಗುರಿಯಾಗಿದ್ದೇವೆ. ಈಗ ಈ ಮಟ್ಟಿನ ಸ್ವಾತಂತ್ರ್ಯ ನಮ್ಮ ಹುಡುಗರಿಗೆ ಸಿಕ್ಕಿದೆಯಲ್ಲಾ ಎಂದು ಸಂಭ್ರಮವಾಗುತ್ತದೆ.' ಈ ಉತ್ತರದಿಂದ ಸಂದರ್ಶಕ ಗೊಂದಲಗೊಂಡ. 'ಸಿಗರೇಟ್ ಸೇದುವುದು ಹಾನಿಕಾರಕವಲ್ಲವೆ? ಇದರಿಂದಾಗಿ ನಿಮ್ಮ ಹುಡುಗರಿಗೆ ಕ್ಯಾನ್ಸರ್ ಬರುವ ಸಾಧ್ಯತೆಗಳಿರುತ್ತಲ್ಲವೆ?' ಎಂದು ಕಳಕಳಿ ವ್ಯಕ್ತಪಡಿಸಿದ. ಅದಕ್ಕೆ ಆ ದಲಿತ ವಿದ್ವಾಂಸರು ಒಂಚೂರೂ ವಿಚಲಿತರಾಗದೆ 'ಬರಲಿ ಬಿಡಿ ಸಾರ್. ಕ್ಯಾನ್ಸರ್ ರೋಗ ಜಾತಿರೋಗದಷ್ಟು ಕೆಟ್ಟದೇನೋ ಅಲ್ಲ' ಎಂದು ಉತ್ತರಿಸಿದರು. ಮಿನ್ನುಲಿಯಾದ್ದರಿಂದ ಅವರ ಮುಖ ನನಗೆ ಕಾಣುತ್ತಿರಲಿಲ್ಲ. ಆದರೂ ದೇಸಾಯರ ಕತೆಯ ಮಗಳ ನಗೆ ಅವರ ಮುಖದಲ್ಲಿ ಇದ್ದಿರಲೇಬೇಕು ಎಂದು ಊಹಿಸುತ್ತಿದ್ದೆ. ಶೋಷಣೆಗೊಳಗಾದ ವ್ಯಕ್ತಿಯ ಆಲೋಚನಾ ಕ್ರಮ ಹೇಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಇಲ್ಲಿ ದೇಹದ ನೋವಿಗಿಂತಲೂ ಮಾನಸಿಕ ನೋವಿನಿಂದ ಶೋಷಿತನೊಬ್ಬ ಹೆಚ್ಚು ಬಳಲಿರುತ್ತಾನೆ. ಆ ಕಾರಣದಿಂದಲೇ ಎದುರಾಳಿಯನ್ನು ಕೇವಲ ದೈಹಿಕ ಹಿಂಸೆಗೆ ಒಳಪಡಿಸುವುದು ಅವನಿಗೆ ಸಂತಸ ಕೊಡುವುದಿಲ್ಲ. ಮಾನಸಿಕ ಹಿಂಸೆ ನೀಡುವುದೇ ಹೆಚ್ಚಿನ ಸಮಾಧಾನ ನೀಡುತ್ತದೆ.

ಇಬ್ಬರು ವ್ಯಕ್ತಿಗಳೇ ಆಗಲಿ, ಸಂಸ್ಥೆ-ಸಂಘಟನೆಗಳ ನಡುವೆ ಮನಸ್ಸರ ಒಡನಾಟವೇ ಆಗಲಿ - ಯಾವುದೇ ರೀತಿಯಲ್ಲಿ ಅವರ ನಡುವೆ ಸಂಬಂಧವೊಂದು ಬೆಳೆದರೆ ಅವರಿಬ್ಬರೂ ಒಂದಕ್ಕೊಂದು ದೇಹ ಅಂಟಿಸಿಕೊಂಡ ಗಂಡಭೇರುಂಡ ಪಕ್ಷಿಯಂತೆ ಮಾರ್ಪಡುತ್ತಾರೆ. ಎರಡು ಮುಖಗಳಿದ್ದರೂ ದೇಹವು ಒಂದೇ ಆಗಿರುತ್ತದೆ. ಯಾರು ಕಾಯವನ್ನು ದಂಡಿಸಿದರೂ ಮತ್ತೊಬ್ಬರಿಗೆ ನೋವಾಗುತ್ತದೆ. ಇಬ್ಬರ ನಡುವೆ ಸಂಬಂಧ ಗಟ್ಟಿಯಿದ್ದಷ್ಟೂ ನೋವಿನ ತೀವ್ರತೆ ಹೆಚ್ಚು, ನೋವನುಭವಿಸುವ ಕಾಲಾವಧಿಯೂ ಹೆಚ್ಚು. ಇಬ್ಬರೂ ಒಬ್ಬರಿಗೊಬ್ಬರು ನೋವು ಮಾಡದಂತೆ ಮುಂದುವರೆದರೆ ಮಾತ್ರ ಆ ಸಂಬಂಧ ಉಳಿಯುತ್ತದೆ. ಯಾವುದೇ ದೃಷ್ಟಿಯಿಂದ ನೋಡಿದರೂ ದೇಹ ವಿರೂಪಗೊಳಿಸುವ ವಿಕೃತವು ಸ್ವಂತ ಒಳಿತಿಗಾಗಿಯೇ ಆಗಲಿ, ಸಮಾಜದ ಒಳಿತಿಗಾಗಿಯೇ ಆಗಲಿ ಒಳ್ಳೆಯದಲ್ಲ. ಪ್ರಪಂಚದ ಬಹುತೇಕ ಧರ್ಮಗಳು ಭಗವಂತ ಕೊಟ್ಟ ದೇಹವನ್ನು ತಾವಾಗಿಯೇ ವಿರೂಪಗೊಳಿಸುವುದನ್ನು ನಿಷೇಧಿಸುತ್ತವೆ. ಯಾಕೆಂದರೆ ಭಗ್ನಗೊಂಡ ಮೂರ್ತಿಯು ಪೂಜೆಗೆ ಅರ್ಹವಾಗುವುದಿಲ್ಲ.

●